# ಸೆಪ್ಟೆಂಬರ್, 2016 - ತಾಳೆ ಬೆಳೆ ಕೃಷಿಗೆ ಸೂಕ್ತ ಸಲಹೆಗಳು

- ❖ ತಾಳೆ ಬೆಳೆಯ ಪಾತಿಯು ತಾಳೆ ಮರದ ಚುರುಕಾದ ಬೇರಿನ ವಲಯವಾಗಿರುತ್ತದೆ ಆದುದರಿಂದ ತಾಳೆ ಮರದೊಂದಿಗೆ ಪೋಷಕಾಂಶಕ್ಕಾಗಿ ಇತರೆ ಕಳೆ ಗಿಡಗಳೊಂದಿಗೆ ಪೈ ಪೋಟಿಯನ್ನು ತಪ್ಪಿಸಲು ಪಾತಿಯಲ್ಲಿ ಕಳೆಗಳನ್ನು ತೆಗೆದು ಸ್ವಚ್ಛವಾಗಿ ಕಾಪಾಡಿಕೊಂಡು ಬರುವುದು ಸೂಕ್ತ.

- ❖ ತಾಳೆ ಬೆಳೆಯೊಂದಿಗೆ ಅಂತರ ಬೆಳೆ ಬೇಸಾಯ ಕೈಗೊಳ್ಳಲು, ಬಿಸಿಲು, ಗಾಳಿ, ನೀರು ಮತ್ತು ಪೋಷಕಾಂಶಗಳಿಗೆ ತಾಳೆ ಸಸಿಯೊಂದಿಗೆ ಪೈಪೋಟಿ ನೀಡದಂತಹ ಸೂಕ್ತವಾದ ಅಂತರ ಬೆಳೆಯನ್ನು ಆರಿಸಿಕೊಳ್ಳುವುದು ಸೂಕ್ತ.

- ❖ ತಾಳೆ ತೋಟದಲ್ಲಿ ಅಂತರ ಬೆಳೆ ಬೇಸಾಯ ಕೈಗೊಳ್ಳುವ ಸಂದರ್ಭದಲ್ಲಿ ತಾಳೆ ಸಸಿಗಳಿಗೆ ಮತ್ತು ಅಂತರಬೆಳೆಗೆ ಶಿಫಾರಸ್ಸು ಮಾಡಿರುವಂತೆ ಪ್ರತ್ಯೇಕ ಪ್ರಮಾಣದ ಗೊಬ್ಬರವನ್ನು ನೀಡುವುದು.

- ❖ ಉತ್ಪತಿಯಾಗುವ ಹೂ ಗೊಂಕಾಲುಗಳನ್ನು ನಾಟಿ ಮಾಡಿದ ಮೊದಲ, ಎರಡು ಮತ್ತು ಮೂರನೇ ವರ್ಷಗಳಲ್ಲಿ ತೆಗೆಯಬೇಕು. ಈ ಕ್ರಿಯೆಯಿಂದ ಗಿಡದ ಕಾಂಡವು ಗಟ್ಟಿಯಾಗಿ ಬೆಲೆಯುವುದರೊಂದಿಗೆ ಬೇರುಗಳು ಬಲವಾಗಿ ಬೆಳೆಯುತ್ತವೆ.